ದಿನಾಂಕಃ07.12.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ ಕೆ.ಎಸ್.ಎ. ವಕೀಲರಿಂದಃ**

ನಾನು ಹಾಲೀ ಮೂಡಿಗೆರೆಯಲ್ಲಿ ವಾಸಿಸುತ್ತಿರುತ್ತೇನೆ. ನಿಪಿ-3 ರ ನಕ್ಷೆಯನ್ನು ಯಾವ ದಿನಾಂಕದಂದು ತಯಾರು ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ಯಾವುದೇ ದಿನಾಂಕ ನಮೂದಾಗಿಲ್ಲ ಎಂದರೆ ನನಗೆ ನೆನಪಿಲ್ಲ. ನಿಪಿ-3 ರಲ್ಲಿ ಬಹಳಷ್ಟು ತಿದ್ದುಪಡಿಯಾಗಿದೆ ಎಂದರೆ ಸರಿ. ನಾನು ಸಂಬಂಧಪಟ್ಟ ಅಧಿಕಾರಿಯೊಂದಿಗೆ ಶಾಮೀಲಾಗಿ ಸುಳ್ಳು ನಕ್ಷೆ ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಯಾವುದೇ ಅಧಿಕಾರಿಯ ಸಹಿ ಇಲ್ಲ ಎಂದರೆ ಸರಿಯಲ್ಲ. ದರಕಾಸ್ತು ಜಮೀನಿನ ಸ್ಕೆಚ್ ನಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳ ಸಹಿಗಳು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ನ್ನು ನಾನೇ ತಯಾರಿಸಿ ಅದಕ್ಕೆ ಸೀಲು ಹಾಕಿ ಸಹಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ನ್ನು ತಯಾರಿಸಿದವರ ಹೆಸರು ಹೇಳಲಾಗುವುದಿಲ್ಲ.

ನಿಪಿ-3 ರ ದಾಖಲೆಯನ್ನು ಯಾವ ದಿನಾಂಕದಂದು ಪಡೆಯಲಾಗಿದೆ ಎಂದು ನೆನಪಿಲ್ಲ ಆದರೆ, ದಾವಾ ಸಲ್ಲಿಸುವ ಮುನ್ನವೇ ಪಡೆಯಲಾಗಿದೆ. ನಿಪಿ-3 ನ್ನು ಸರ್ಕಾರದಿಂದ ತಯಾರು ಮಾಡಿದ್ದರೆ ಅದರ ಒಕ್ಕಣೆಯಲ್ಲಿ ಬ್ಲಾಕ್ ನಂಬರ್ ಗಳನ್ನು ನಮೂದುಮಾಡುತ್ತಿದ್ದರು ಎಂದರೆ ನನಗೆ ಗ್ತೊತ್ತಿಲ್ಲ. ನನ್ನ ತಂದೆಯ ಹೆಸರು ಹೆಚ್.ಆರ್.ಕೃಷ್ಣಯ್ಯ. ನಿಪಿ-3 ರಲ್ಲಿ ಹೆಚ್.ಆರ್.ಕೃಷ್ಣ ಎಂದು ಇದೆ ಎಂದರೆ ಸಾಕ್ಷಿಯು ಆ ರೀತಿ ಹೆಸರು ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿ ಜಮೀನಿನ ವಿಸ್ತೀರ್ಣವನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಆಗಿರುವ ತಿದ್ದುಪಡಿಗಳ ಬಗ್ಗೆ ಸಹಿಗಳು ಇಲ್ಲ ಎಂದರೆ ಸಾಕ್ಷಿಯು ನಕ್ಷೆ ತಿದ್ದುಪಡಿಯಾಗಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ರ ನಕ್ಷೆಯನ್ನು ತಿದ್ದುಪಡಿ ಮಾಡಿ ದುರುದ್ದೇಶದಿಂದ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-3 ರಲ್ಲಿ ನಕಲು ಎಂದು ಬರೆದು ತಹಶೀಲ್ದಾರ್ ರವರು ಸಹಿ ಮಾಡಿದ್ದಾರೆ ಎಂದರೆ ಸರಿ. ನಿಪಿ-3 ರ ಮೂಲ ಪ್ರತಿ ತಾಲ್ಲೂಕು ಕಚೇರಿಯಲ್ಲಿದೆ. ಒಂದುವೇಳೆ ನಿಜವಾಗಿಯೂ ಸರ್ವೇಯಾಗಿದ್ದರೆ ನಿಪಿ-3 ನಕ್ಷೆಯನ್ನು ಮೂಲಪ್ರತಿಯಿಂದ ನಕಲು ಮಾಡಿ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರ ನಕಲು ಪ್ರತಿ ಮಾಡಿರುವ ದಿನಾಂಕ ಗೊತ್ತಿಲ್ಲ. ನಿಪಿ-3 ನ್ನು ತಯಾರಿಸುವ ಕಾರಣ ಅದರಲ್ಲಿ ದಿನಾಂಕ ನಮೂದಾಗಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನಿಗೂ ನಿಪಿ-3 ರ ನಕ್ಷೆಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಂಗಡಿ ಗ್ರಾಮದ ಸ.ನಂ.121 ರ ಒಟ್ಟು ವಿಸ್ತೀರ್ಣ 15 ಎಕರೆ 22 ಗುಂಟೆ. ಒಟ್ಟು ವಿಸ್ತೀರ್ಣದ ಪೈಕಿ ದಾವಾ ಜಮೀನು ಎಲ್ಲಿ ಇದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಜಮೀನಿನ ಉತ್ತರಕ್ಕೆ ಸ.ನಂ.119 ರ ಸುರೇಶ್ ರವರ ಗದ್ದೆ, ದಕ್ಷಿಣಕ್ಕೆ ಸ.ನಂ.121 ರ ಸತೀಶ್ ರವರ ತೋಟ, ಪೂರ್ವಕ್ಕೆ ಸರ್ಕಾರಿ ಜಮೀನು ಮತ್ತು ಪಶ್ಚಿಮಕ್ಕೆ ಪ್ರಕಾಶ್ ರವರ ಮನೆ ಮತ್ತು ತೋಟ ಇದೆ. ನಾನು ದುರುದ್ದೇಶದಿಂದ ದಾವಾ ಜಮೀನಿಗೆ ಸುಳ್ಳು ಚೆಕ್ಕುಬಂದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿರುವ ಚೆಕ್ಕುಬಂದಿಯೊಳಗಿನ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಜಮೀನು 1980-81 ರಲ್ಲಿ ನನ್ನ ತಂದೆಗೆ ಮಂಜೂರಿಯಾಗಿದೆ. ಅಂಗಡಿ ಗ್ರಾಮ ಪೋಡಿ ಮುಕ್ತ ಗ್ರಾಮ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನಿನ ಪೋಡಿಗಾಗಿ ಅರ್ಜಿ ಸಲ್ಲಿಸಲಾಗಿದೆ ಆದರೆ, ಪೋಡಿಯಾಗಿಲ್ಲ. ನಾನು ಹೇಳಿದಂತೆ ದಾವಾ ಜಮೀನು ನನ್ನ ಸ್ವಾಧೀನದಲ್ಲಿ ಇದಿದ್ದರೆ ಪೋಡಿಯಾಗುತ್ತಿತ್ತು ಎಂದರೆ ಸಾಕ್ಷಿಯು ದಾಖಲೆಗಳು ಸರಿಯಿಲ್ಲದ ಕಾರಣ ಪೋಡಿಯಾಗಿಲ್ಲ ಎಂದು ನುಡಿಯುತ್ತಾರೆ. ದಾವಾ ಜಮೀನಿಗೆ ಸಂಬಂಧಿಸಿದಂತೆ ಮರಮಾಲಿಕಿಯನ್ನು ಪಾವತಿ ಮಾಡಲಾಗಿದೆ. ಆ ಸಂಬಂಧ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ.

ನನ್ನ ತಂದೆ ತಾಯಿಗೆ ನಾನೊಬ್ಬಳೆ ಮಗಳು. ಪ್ರತಿವಾದಿಗಳು ಅಂಗಡಿ ಗ್ರಾಮದ ಜೇನುಬೈಲಿನ ವಾಸಿಗಳು. ಪ್ರತಿವಾದಿಗಳಿಗೆ ಯಾವುದೇ ಜಮೀನು ಇಲ್ಲ. ಪ್ರತಿವಾದಿಗಳು ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಿ.25.01.2022 ರಂದು ಪ್ರತಿವಾದಿಗಳು ಸತೀಶ್ ಮತ್ತು ಲಕ್ಷ್ಮಣ್ ಎಂಬುವವರನ್ನು ಕರೆದುಕೊಂಡು ನಮ್ಮ ತೋಟದ ಬಳಿ ಸರ್ವೇ ಮಾಡಿಸಲು ಬಂದಿದ್ದರು. ಪ್ರತಿವಾದಿಗಳ ಮುಗ್ಧತೆಯನ್ನು ಬಳಸಿಕೊಂಡು ಅವರಿಂದ ಅಕ್ರಮ ಲಾಭ ಪಡೆಯುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಜಮೀನಿಗೆ ತೊಂದರೆ ಕೊಟ್ಟ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಾನು ವಾಸವಿರುವ ಸ್ಥಳದಿಂದ ದಾವಾ ಜಮೀನು ದೂರದಲ್ಲಿದೆ ಎಂದರೆ ಸರಿ. ಆ ಕಾರಣ ದಾವಾ ಜಮೀನಿನ ಬಗ್ಗೆ ನನಗೆ ನಿಖರವಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.